2 ಕಳಸಾ ನಾಲಾ ತಿರುವು ಯೋಜನೆಯ ಕೂಡು ಕಾಲುವೆಯ ಅಂದಾಜು ಮೊತ್ತ ರೂ 40 51 ಕೋಟಿಗಳು

3 ಬಂಧೂರು ಅಣೆಕಟ್ಟೆಯ ಅಂದಾಜು ಮೊತ್ತ ರೂ 36 70 ಕೋಟಿಗಳು

4 ಬಂಧೂರುನಾಲಾ ತಿರುವು ಯೋಜನೆಯ ಕೂಡು ಕಾಲುವೆಯ ಅಂದಾಜು ಮೊತ್ತ ರೂ 33 50 ಕೋಟಿಗಳು

ಆ) ಕಳಸಾನಾಲಾ ತಿರುವು ಯೋಜನೆಯ ಅರಣ್ಯೇತರ ಪ್ರದೇಶದಲ್ಲಿನ ಕೂಡು ಕಾಲುವೆಯ ಕಾಮಗಾರಿ ಪ್ರಗತಿಯಲ್ಲಿದೆ ಮಹದಾಯಿ ಕಣಿವೆಯಿಂದ ಮಲಪ್ರಭಾ ಜಲಾಶಯಕ್ಕೆ 7 56 ಟಿ ಎಂ ಸಿ ನೀರನ್ನು ವರ್ಗಾಹಿಸಲು ಕೇಂದ್ರ ಸರ್ಕಾರವು ದಿನಾಂಕ 30 4 2002ರಂದು ತಾತ್ವಿಕ ಅನುಮೋದನೆಯನ್ನು ನೀಡಿದ್ದು, ಇದಕ್ಕೆ ಗೋವಾ ರಾಜ್ಯವು ಮಾಡಿರುವ ಆಕ್ಷೇಪಣೆಗಳಂತೆ ದಿನಾಂಕ 19 9 2002ರಂದು ತಡೆ ಆದೇಶವನ್ನು ನೀಡಿದೆ ಕಳಸಾನಾಲಾ ಮತ್ತು ಬಂಧೂರುನಾಲಾ ತಿರುವು ಯೋಜನೆಗಳ ಅರಣ್ಯ ಪ್ರದೇಶದ ತೀರುವಳಿ, ಕೇಂದ್ರದ ಅರಣ್ಯ ಮಂತ್ರಾಲಯವು ಇನ್ನು ನೀಡಿರುವುದಿಲ್ಲ ಈ ಯೋಜನೆಗಳ ಕುರಿತು ಸರ್ವೋಚ್ಚ ನ್ಯಾಯಾಲಯದಲ್ಲಿ ಗೋವಾ ರಾಜ್ಯವು ಮೂಲ ದಾವೆ ಸಂಖ್ಯೆ 4/2006ನ್ನು ಹೂಡಿದ್ದು, ಅದು ವಿಚಾರಣೆಯ ಹಂತದಲ್ಲಿದೆ ಈ ಕಾರಣಗಳಿಂದಾಗಿ, ಅರಣ್ಯ ಪ್ರದೇಶಗಳಲ್ಲಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವುದು ಸಾಧ್ಯವಾಗಿರುವುದಿಲ್ಲ ಆದುದರಿಂದ, ಯೋಜನೆಯ ಕಾಮಗಾರಿಗಳ ಪೂರ್ಣಗೊಳಿಸುವಿಕೆಯ ಅವಧಿಯನ್ನು ನಿರ್ದಿಷ್ಟವಾಗಿ ತಿಳಿಸಲು ಸಾಧ್ಯವಾಗುವುದಿಲ್ಲ

468(926) ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಕೊಳ್ಳೇಗಾಲ ಕ್ಷೇತ್ರಕ್ಕೆ ಕಳೆದ ಸಾಲಿನಲ್ಲಿ ಉನ್ನತ ಶಿಕ್ಷಣದ ವ್ಯಾಸಂಗಕ್ಕೆ ಪದವಿ ಕಾಲೇಜುಗಳ ಮಂಜೂರಾತಿಗೆ ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಬಂದಿದ್ದರೆ, ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು,

ಇ) ಈ ಸಾಲಿನಲ್ಲಾದರೂ ಮಂಜೂರು ಮಾಡಲಾಗುವುದೇ?

ಶ್ರೀ ಡಿ ಎಚ್ ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)

ಅ) ಬಂದಿರುವುದಿಲ್ಲ

ಆ) 2007–08ನೇ ಸಾಲಿನಲ್ಲಿ ಈ ಕ್ಷೇತ್ರ ವ್ಯಾಪ್ತಿಯ ಯಳಂದೂರು ತಾಲ್ಲೂಕು ಕೇಂದ್ರದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜನ್ನು ಪ್ರಾರಂಭಿಸಲು ಪರಿಶೀಲಿಸಲಾಗುತ್ತಿದೆ

ಇ) ಪರಿಶೀಲಿಸಲಾಗುತ್ತಿದೆ

469(927) ಶ್ರೀ ಬಾಲರಾಜ್ ಎಸ್ (ಕೊಳ್ಳೇಗಾಲ) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಚಾಮರಾಜನಗರ ಜಿಲ್ಲೆಗೆ ಜಿಲ್ಲಾ - ಪಂಚಾಯತ್‌ನಿಂದ ಲಿಂಕ್ ಡಾಕ್ಯುಮೆಂಟ್ ಮುಖಾಂತರ ಬಿಡುಗಡೆ ಮಾಡಿರುವ ಹಣ ಎಷ್ಟು, ಯಾವ ಯಾವ ಯೋಜನೆಗಳು ಈ ವ್ಯಾಪ್ತಿಗೆ ಬರುತ್ತವೆ, (ಪೂರ್ಣ ವಿವರ ನೀಡುವುದು)

ಆ) ಲಿಂಕ್ ಡಾಕ್ಯುಮೆಂಟ್ ಹೊರತುಪಡಿಸಿ ಯಾವ ಯಾವ ಯೋಜನೆಗಳಿಗೆ ಹಣ ಬಿಡುಗಡೆ ಮಾಡಲಾಗಿದೆ ಹಾಗೂ ಯಾವ ಹಂತದಲ್ಲಿದೆ,

ಇ) ಕೊಳ್ಳೇಗಾಲ ಮತ್ತು ಯಳಂದೂರು ತಾಲ್ಲೂಕುಗಳ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿಗಳಿಗೆ ಬಿಡುಗಡೆಯಾದ ಹಣ ಎಷ್ಟು

ಈ) ಈ ಕಾಮಗಾರಿಗಳು ಯಾವ ಹಂತದಲ್ಲಿವೆ, ವಿವಿಧ ಇಲಾಖೆಗಳ ಯೋಜನೆಗಳಿಂದ ಆಯ್ಕೆಯಾಗಿರುವ ಫಲಾನುಭವಿಗಳ ಪೂರ್ಣ ವಿವರ ನೀಡುವುದು ಹಾಗೂ ಇದಕ್ಕೆ ಅನುಸರಿಸಿದ ಮಾನದಂಡದ ಬಗ್ಗೆ ಮಾಹಿತಿ ನೀಡುವುದು?

ಶ್ರೀ ಸಿ ಎಂ ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು)

ಅ) ಚಾಮರಾಜನಗರ ಜಿಲ್ಲಾ ಪಂಚಾಯತ್‌ಗೆ ಲಿಂಕ್ ಡಾಕ್ಯುಮೆಂಟ್ ಮುಖಾಂತರ ಬಿಡುಗಡೆ ಮಾಡಿರುವ ಹಣ ರೂ 5675 07 ಲಕ್ಷಗಳು, ಯೋಜನೆಗಳ ವಿವರಗಳನ್ನು ಅನುಬಂಧ–1ರಲ್ಲಿ ನೀಡಿದೆ